ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಎ) ಈ ಕೆಳಕಂಡಂತೆ ಪ್ರಸ್ತಾಪಿಸಲಾಗುತ್ತಿದೆ :

1) 2000 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ರೂ.180 ಲಕ್ಷಗಳು.

2) ರೂ. 75,000-00 ಸಾವಿರಗಳು ಶಾಲಾ ಕೊಠಡಿಗಳಿಗೊಂದರಂತೆ 1200 ಶಾಲೆ ಕೊಠಡಿಗಳಿಗೆ ರೂ. 900 ಲಕ್ಷಗಳು.

3) 50 ಸರ್ಕಾರಿ ಪ್ರೌಢಶಾಲೆಗಳು : ಜೂನಿಯರ್ ಕಾಲೇಜುಗಳಿಗೆ ಪ್ರಯೋಗಶಾಲೆ ಹಾಲ್‌ಗಳ ನಿರ್ಮಾಣಕ್ಕಾಗಿ ರೂ. 100 ಲಕ್ಷಗಳು.

4) ಮನೆ, ಮನೆಗಳ ಸರ್ವೆ ಮಾಡಲು ಮತ್ತು ಶಿಕ್ಷಕರಿಗೆ ತರಭೇತಿ ನೀಡುವ ಸಲುವಾಗಿ ರೂ.20 ಲಕ್ಷಗಳು.

ಬಿ) ಇಲ್ಲ

ಸಿ) ಅನ್ವಯಿಸುವುದಿಲ್ಲ.

ಸಂಚಾರಿ ಯುನಾನಿ ಆಸ್ಪತ್ರೆ ಕುರಿತು

2197 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಸಂಚಾರಿ ಯುನಾನಿ ಆಸ್ಪತ್ರೆಯನ್ನು ಸರ್ಕಾರವು ನಡೆಸುತ್ತಿದೆಯೇ?

ಆ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರವು ಉದ್ದೇಶಿಸಿದೆಯೇ?

ಡಾ|| ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಪ್ರಸ್ತುತದಲ್ಲಿ ಸಂಚಾರಿ ಯುನಾನಿ ಆಸ್ಪತ್ರೆಗಳನ್ನು ಹೊಂದುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಬೆಂಗಳೂರಿನಲ್ಲಿ ಚಿರತೆ ಹತ್ಯೆ

2199 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರಿನ ಬಿಇಎಲ್ ಕಾರ್ಖಾನೆ ಬಳಿ ಇತ್ತೀಚೆಗೆ ಚಿರತೆಯನ್ನು ಗುಂಡಿಟ್ಟು ಕೊಂದು ಹಾಕಿರುವುದು ನಿಜವಲ್ಲವೇ?

2) *ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?*

3) *ಈ ಚಿರತೆಯನ್ನು ಜೀವಸಹಿತ ಹಿಡಿಯಲು ಅರಣ್ಯ ಇಲಾಖೆ ಕ್ರಮ ಕೈಗೊಂಡಿತ್ತೆ?*

4) *ಈ ಸಂದರ್ಭದಲ್ಲಿ ಗುಂಡಿನಿಂದ ಬಿಇಎಲ್ ನೌಕರರೊಬ್ಬರು ಸಾವಿಗೀಡಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5) *ಪ್ರಾಣಿಗಳನ್ನು ಕೊಲ್ಲುವುದು ಅಪರಾಧವಲ್ಲವೇ?*

6) *ಹಾಗಿದ್ದಲ್ಲಿ ಅರಣ್ಯ ಇಲಾಖೆಯವರು ಪ್ರಾಣಿಗಳನ್ನು ಕೊಲ್ಲಲು ನಿರ್ಬಂಧವಿಲ್ಲವೇ?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1) ಹೌದು.

2) ಅರಣ್ಯ ಇಲಾಖೆಯು ಚಿರತೆಯನ್ನು ಜೀವ ಸಹಿತ ಹಿಡಿಯುವ ಉದ್ದೇಶವಿಟ್ಟು ಕೊಂಡು ವನ್ಯಜೀವಿ ಸಿಬ್ಬಂದಿ ಮತ್ತು ಪಶುವೈದ್ಯಾಧಿಕಾರಿಗಳೊಂದಿಗೆ ಅರವಳಿಕೆ ಉಪಕರಣಗಳನ್ನು ತೆಗೆದುಕೊಂಡು ಸ್ಥಳಕ್ಕೆ ಭೇಟಿ ನೀಡುವಷ್ಟರಲ್ಲಿ ಆಗಲೇ ಸಂಬಂಧಪಟ್ಟ ಪೋಲೀಸ್ ಇಲಾಖೆಯವರು ಸ್ಥಳದಲ್ಲಿ ಹಾಜರಾಗಿದ್ದರು. ಅರಣ್ಯ ಇಲಾಖೆಯ ಸಿಬ್ಬಂದಿ ಚಿರತೆಗೆ ಅರವಳಿಕೆ ಕೊಟ್ಟು ಜೀವ ಸಹಿತ ಸೆರೆ ಹಿಡಿಯುವ ಪ್ರಯತ್ನ ನಡೆಸುತ್ತಿದ್ದಾಗ, ಸ್ಥಳದಲ್ಲಿ ಸಹಸ್ರಾರು ಸಾರ್ವಜನಿಕರು ನೆರೆದಿದ್ದು ಪರಿಸ್ಥಿತಿಯನ್ನು ಸಾಕಷ್ಟು ಹದಗೆಡಿಸಿದ್ದರು. ಪೋಲೀಸ್ ಇಲಾಖೆಯನ್ನು ಸಾರ್ವಜನಿಕರ ಗುಂಪನ್ನು ಚದುರಿಸಲು ಎಷ್ಟೇ ಪ್ರಯತ್ನಿಸಿದರೂ ಅವರೊಂದಿಗೆ ಸಾರ್ವಜನಿಕರು ಸಹಕರಿಸಲಿಲ್ಲ. ಸುಮಾರು ಸಂಜೆ 5.45ರ ವೇಳೆಗೆ ಸಾರ್ವಜನಿಕರ ಕಿರುಚಾಟದಿಂದ ಚಿರತೆಯು ಇದ್ದಕ್ಕಿದ್ದಂತೆ ಪೊದೆಯೊಳಗಿಂದ ಹೊರಗೆ ಬಂದು ನೇರವಾಗಿ ಪೋಲೀಸ್ ಸಿಬ್ಬಂದಿಯ ಮೇಲೆ ಎರಗಿದಾಗ ಅನ್ಯ ಮಾರ್ಗವಿಲ್ಲದೇ ಪೋಲೀಸರು ಚಿರತೆಯ ದಾಳಿಯಿಂದ ತಪ್ಪಿಸಿಕೊಳ್ಳಲು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದರು.

3) ಹೌದು

4) ಹೌದು

5) ಹೌದು

6) ನಿರ್ಬಂಧವಿದೆ.

ದಾಖಲಾತಿ ಮಾಹಿತಿ ಒದಗಿಸದೇ ಇರತಕ್ಕ ಪದವಿ ಪೂರ್ವ ಕಾಲೇಜುಗಳು

2200 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜುಗಳ ಪೈಕಿ ಎಷ್ಟು ಕಾಲೇಜುಗಳು ಪ್ರಥಮ ಪದವಿ ಪೂರ್ವ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಗಳನ್ನು ಪದವಿ ಪೂರ್ವ ಮಂಡಳಿಗೆ ನೀಡಿರುವುದಿಲ್ಲ?*